**Udayavani**

Date: 03-04-2021 Page No: 2

Edition: Mysore Language: Kannada

# ಭಾರತ ಉತ್ಪಾದನಾ ವಲಯದಲ್ಲಿ ವಿಶ್ವವನ್ನಾಳಲಿದೆ




ನಗರದ ಸಿದ್ಧಾರ್ಥನಗರದಲ್ಲಿರುವ ಎಸ್‌ಡಿಎಂಐಎಂಡಿ ಕಾಲೇಜಿನ 26ನೇ ಘಟಿಕೋತ್ಸವ ನಡೆಯಿತು.

**ಮೈಸೂರು:** ವಿದ್ಯಾರ್ಥಿಗಳು ಪಠ್ಯ ಓದುವುದರೊಂದಿಗೆ ಪ್ರಾಯೋಗಿಕ ಜ್ಞಾನ ಪಡೆಯುವುದು ಬಹಳ ಮುಖ್ಯ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವಿರೇಂದ್ರ ಹೆಗ್ಗಡೆ ಹೇಳಿದರು.

ನಗರದ ಸಿದ್ಧಾರ್ಥನಗರದಲ್ಲಿರುವ ಎಸ್‌ಡಿಎಂಐಎಂಡಿ ಕಾಲೇಜಿನ 26ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಕಳೆದ 10 ವರ್ಷಗಳಲ್ಲಿ ಉನ್ನತ ಶಿಕ್ಷಣ ಕ್ಷೇತ್ರ ಬಹಳಷ್ಟು ಬದಲಾಗಿದೆ. ನಿರ್ವಹಣೆಯಂತಹ ವಿಷಯಗಳಲ್ಲಿ ವಿದ್ಯಾರ್ಥಿಗಳು ಪಠ್ಯ ಓದುವ ಜೊತೆಗೆ ಪ್ರಾಯೋಗಿಕ ಜ್ಞಾನ ಪಡೆಯುವುದು ಬಹಳ ಮುಖ್ಯವಾಗಿದೆ. ಆದ್ದರಿಂದ ಕೇಸ್ ಸ್ಟಡಿ, ಪ್ರಾಜೆಕ್ಟ್ ಮತ್ತಿತರ ವಿಷಯಗಳನ್ನು ಕಲಿಕೆಯಲ್ಲಿ ಸೇರಿಸಲಾಗಿದೆ ಎಂದರು.

ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಜೊತೆಗೆ ಮೌಲ್ಯಗಳನ್ನು ಬಿತ್ತುವುದು, ಸಾಮಾಜಿಕ ಜವಾಬ್ದಾರಿ, ಸುಸ್ಥಿರತೆಯ ಬಗ್ಗೆ ಅರಿವು ಮೂಡಿಸುವುದೂ ಮುಖ್ಯ. ಈ ಎಲ್ಲ ಕೆಲಸಗಳನ್ನೂ ಎಸ್‌ಡಿಎಂಐಎಂಡಿ ಮಾಡುತ್ತಾ ಬಂದಿದೆ ಎಂದರು.

ಟೊಯೊಟಾ ಇಂಡಸ್ಟ್ರೀಸ್ ಎಂಜಿನ್ ಇಂಡಿಯಾ ಕಂಪನಿಯ ಉಪ ವ್ಯವಸ್ಥಾಪಕ ನಿರ್ದೇಶಕ ಟಿ.ಆರ್.ಪರಶುರಾಮನ್ ಮಾತನಾಡಿ, ಇನ್ನು 10 ವರ್ಷಗಳಲ್ಲಿ ಭಾರತ ಉತ್ಪಾದನಾ ವಲಯದಲ್ಲಿ ಪ್ರಪಂಚವನ್ನು ಆಳುತ್ತದೆ. ನಮ್ಮ ದೇಶದಲ್ಲಿರುವಷ್ಟು ಯುವಜನತೆ ಬೇರೆ ಯಾವ ದೇಶದಲ್ಲೂ ಇಲ್ಲ. ಚೀನಾ, ಜಪಾನ್‌ನಂತಹ ಮುಂದುವರಿದ ದೇಶಗಳಲ್ಲಿ ಮಧ್ಯವಯಸ್ಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇದರ ಪರಿಣಾಮವಾಗಿ ಪ್ರಸ್ತುತ ಜಗತ್ತಿನ ಉತ್ಪಾದನಾ ವಲಯವನ್ನು ಆಳುತ್ತಿರುವ ಚೀನಾ ಸೇವಾ ವಲಯ ಪ್ರವೇಶಿಸಿ, ಸೇವಾ ವಲಯದಲ್ಲಿ ಮುಂದಿರುವ ಭಾರತ ಉತ್ಪಾದನಾ ವಲಯದಲ್ಲಿ ತನ್ನ ಛಾಪು ಮೂಡಿಸಲಿದೆ ಎಂದರು.

ನಮ್ಮ ದೇಶಕ್ಕೆ ಹೆಚ್ಚು ನಿರ್ವಹಣಾ ವಿದ್ಯಾರ್ಥಿಗಳ (ಮ್ಯಾನೇಜ್ಮೆಂಟ್ ಸ್ಟೂಡೆಂಟ್ಸ್) ಅವಶ್ಯಕತೆ ಇದೆ. ಎಂದರು.

ಘಟಿಕೋತ್ಸವದಲ್ಲಿ 170ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪಿ.ಜಿ.ಡಿಪ್ಲೊಮಾ ಇನ್ ಮ್ಯಾನೇಜ್ಮೆಂಟ್ ಪದವಿ ಪ್ರದಾನ ಮಾಡಲಾಯಿತು. 2019-21ನೇ ಸಾಲಿನ 6 ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದರು. ಈ ವೇಳೆ ಪ್ರೇರಣಾ ಎಂಬ ವಿದ್ಯಾರ್ಥಿನಿ ವೀಲ್‌ಚೇರ್‌ನಲ್ಲಿ ಬಂದು ಪದಕ ಸ್ವೀಕರಿಸಿದರು. ಚೇರ್ಮನ್ ಡಾ.ಎಚ್. ಗಾಯತ್ರಿ, ಉದ್ಯಮಿ ಪವನ್ ಇದ್ದರು.